ಕರ್ತನಾದ ಯೇಸುಕ್ರಿಸ್ತನು ಅತಿ ಶೀಘ್ರವಾಗಿ ಈ ಲೋಕಕ್ಕೆ ಬರಲಿರುವನು. ಆತನು 2000 ವರುಷಗಳ ಹಿಂದೆ ಇನ್ನೂ ಈ ಲೋಕದಲ್ಲಿ ಇರುವಾಗಲೇ ಮಾಡಿದಂತಹ ಒಂದು ವಾಗ್ದಾನವಿದು (ಯೋಹಾನ 14:1-3). ಅವರು ಖಂಡಿತವಾಗಿಯೂ ಹಿಂದಿರುಗುವರೆಂಬುದು ನಮಗೆ ನಿಜವಾಗಿಯೂ ತಿಳಿಯುವುದು ಹೇಗೆ? ದಯಮಾಡಿ ಕರ್ತನಾದ ಯೇಸುವು ತಾನೇ ತನ್ನ ಬರೋಣಕ್ಕೆ ಮುಂಚಿತವಾಗಿ ನೆರವೇರುವವೆಂದು ತಿಳಿಯಪಡಿಸಿದ ಪ್ರವಾದನೆಗಳನ್ನು ಓದಿರಿ. ಈ ಪವಿತ್ರ ಗ್ರಂಥಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿ ಅವುಗಳನ್ನು ಜಗತ್ತಿನಲ್ಲಿ ನಡೆಯುತ್ತಿರುವ ಈ ಕ್ಷಣದ ಘಟನೆಗಳೊಂದಿಗೆ ಹೋಲಿಸಿ ನೋಡಿದರೆ ಯೇಸು ಮಹಾಪ್ರಭುವು ನಮ್ಮ ಜೀವಿತಾವಧಿಯಲ್ಲಿಯೇ ಖಂಡಿತಾವಾಗಿ ಹಿಂದಿರುಗುವರೆಂಬುದನ್ನು ರುಜುವಾತುಪಡಿಸುತ್ತದೆ.

**1. ದೇವಾಲಯದ ನಾಶ**

ಆಮೇಲೆ ಯೇಸು ದೇವಾಲಯದಿಂದ ಹೊರಟು ಹೋಗುತ್ತಿರಲು ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ - ಗುರುವೇ, ನೋಡು ಎಂಥಾ ಕಲ್ಲುಗಳು! ಎಂಥಾ ಕಟ್ಟಣಗಳು! ಎಂದು ಹೇಳಿದನು. ಅದಕ್ಕೆ ಯೇಸು ಇವುಗಳನ್ನೆಲ್ಲಾ ನೋಡುತ್ತೀರಲ್ಲವೇ, ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವುದಿಲ್ಲ. ಎಲ್ಲಾ ಕೆಡವಲ್ಪಡುವುದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದರು.(ಮತ್ತಾಯ 24:1-2; ಮಾರ್ಕ 13:1-2; ಲ್ಯೂಕ 21:5-6).**ಇದು ಪದಶಃ ಕ್ರಿ.ಶ. 70ರಲ್ಲಿ ನೆರವೇರಿತು.**

**2. ಆಗಮನದ ಸೂಚನೆಗಳು**

ಯೇಸುಮಹಾಪ್ರಭುವು ಎಣ್ಣೆಯ ಮರಗಳ ಗುಡ್ಡದ ಮೇಲೆ ದೇವಾಲಯದ ಎದುರು ಕೂತಿದ್ದಾಗ, ಶಿಷ್ಯರಾದ -ಪೇತ್ರ, ಯಾಕೋಬ, ಯೋಹಾನ ಮತ್ತು ಅಂದ್ರೇಯ. ಅವರ ಬಳಿ ಬಂದು ರಹಸ್ಯವಾಗಿ ಕೇಳಿದರು: ಗುರುವೇ, ಈ ಘಟನೆಗಳು ಯಾವಾಗ ನಡೆಯುತ್ತವೇ? ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು?(ಮತ್ತಾಯ 24:3; ಮಾರ್ಕ 13:3-4; ಲ್ಯೂಕ 21:7).

**3. ಮೋಸಗಾರರು ಉದ್ಭವಿಸುವರು**

ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನೆಂದರೆ, ನಿಮ್ಮನ್ನು ಯಾರೂ ಮೋಸಮಾಡದಂತೆ ಎಚ್ಚರಿಕೆಯಿಂದಿರಿ. ನನ್ನ ಹೆಸರಿನಲ್ಲಿ ಹಲವರು ಬರುವರು ಮತ್ತು ಹೇಳುವರು, ನಾನೇ ಅವನು, ನಾನೇ ಕ್ರಿಸ್ತ, ಮತ್ತು ಈಗ ಸಮಯ ಹತ್ತಿರವಾಗಿದೆ; ಎನ್ನುತ್ತಾ ಹಲವರನ್ನು ಮೋಸಗೊಳಿಸುವರು. ಆದುದರಿಂದ ಅವರ ಹಿಂದೆ ಹೋಗಬೇಡಿ (ಮತ್ತಾಯ 24:4-5; ಮಾರ್ಕ 13:5-6; ಲ್ಯೂಕ 21:8)

**4. ಯುದ್ಧಗಳು ಮತ್ತು ಯುದ್ಧಗಳ ಗಾಳಿಮಾತು**

ಮತ್ತು ನೀವು ಯುದ್ಧಗಳ, ಗಲಬೆಗಳ ಮತ್ತು ಯುದ್ಧವಾಗುವಹಾಗಿದೆಎಂಬಗಾಳಿಮಾತುಗಳ ಬಗೆ ಕೇಳಿದಾಗ, ತೊಂದರೆಗೊಳಗಾಗಬೇಡಿ - ಭಯಪಡಬೇಡಿ; ಯಾಕೆಂದರೆ ಹಾಗಾಗುವುದು ಅಗತ್ಯ.ಆದರೆ ಅಂತ್ಯ ತಕ್ಷಣ ಬರುವುದಿಲ್ಲ. (ಮತ್ತಾಯ 24:6; ಮಾರ್ಕ 13:7; ಲ್ಯೂಕ 21:9).

**5. ಜನಾಂಗೀಯ ಯುದ್ಧಗಳು | ಭೂಕಂಪಗಳು | ಬರಗಾಲಗಳು | ರೋಗರುಜಿನಗಳು**

ಅನಂತರ ಆತ ಅವರಿಗೆ ಹೇಳಿದರು: ಜನಕ್ಕೆ ವಿರೋಧವಾಗಿ ಜನವೂ, ರಾಜ್ಯಕ್ಕೆ ವಿರೋಧವಾಗಿ ರಾಜ್ಯವು ಏಳುವುವು ಮತ್ತು ಅಲ್ಲಲ್ಲಿ ಬರಗಳುಬರುವುವು, ಭೂಕಂಪಗಳು ಆಗುವುವು.ತೊಂದರೆಗಳು ಮತ್ತು ಸಾಂಕ್ರಾಮಿಕ ರೋಗಗಳು ಎದುರಾಗುತ್ತವೆ; ಉತ್ಪಾತಗಳೂ ಗಗನದಲ್ಲಿ ಮಹಾಸೂಚನೆಗಳೂ ತೋರುವುವು. (ಮತ್ತಾಯ 24:7; ಮಾರ್ಕ 13:8; ಲ್ಯೂಕ 21:10-11).

**6.** ಇವೆಲ್ಲಾ ನೂತನ ಕಾಲವು ಹುಟ್ಟುವ ಪ್ರಸವ ವೇದನೆಯ ಪ್ರಾರಂಭ. (ಮತ್ತಾಯ 24:8; ಮಾರ್ಕ 13:8).

**7. ಕ್ರೈಸ್ತರಿಗೆ ಕಿರುಕುಳ**

ಆದರೆ ಎಚ್ಚರಿಕೆಯಿಂದ ಗಮನಿಸಿ, ಈ ಎಲ್ಲ ಘಟನೆಗಳಿಗೆ ಮೊದಲು, ಅವರು ನಿಮ್ಮ ಮೇಲೆ ಕೈ ಹಾಕುವರು ಮತ್ತು ಕಿರುಕುಳ ಕೊಡುವರು, ನಿಮ್ಮನ್ನು ನ್ಯಾಯ ವಿಚಾರಣೆಯ ಸಭೆಗಳಿಗೆ ಎಳದುಕೊಂಡು ಹೋಗುವರು, ಸಭಾಮಂದಿರಗಳಲ್ಲಿ ನಿಮ್ಮನ್ನು ಹೊಡೆಯುವರು; ನಿಮ್ಮನ್ನು ಸೆರೆಮನೆಗಳಿಗೆ ತಳ್ಳುವರು, ಯಾತನೆಗೊಳಿಸುವರು ಮತ್ತು ನಿಮ್ಮನ್ನು ಕೊಲ್ಲುವರು. ನನ್ನ ಹೆಸರಿನ ನಿಮಿತ್ತವಾಗಿ ಅರಸುಗಳ ಮುಂದಕ್ಕೂ ಅಧಿಪತಿಗಳ ಮುಂದಕ್ಕೂ ತೆಗೆದುಕೊಂಡುಹೋಗಿ ಹಿಂಸೆ ಪಡಿಸುವರು. ಇದು ಸಾಕ್ಷಿ ಹೇಳುವುದಕ್ಕೆ ನಿಮಗೆ ಅನುಕೂಲವಾಗುವುದು. (ಮತ್ತಾಯ 24:9; ಮಾರ್ಕ 13:9; ಲ್ಯೂಕ 21: 12-13).

**8.** ಮತ್ತು ಅವರು ನಿಮ್ಮನ್ನು ಹಿಡುಕೊಂಡುಹೋಗಿಒಪ್ಪಿಸುವಾಗ ಏನು ಹೇಳಬೇಕು ಎಂದು ಮುಂಚಿತವಾಗಿ ಚಿಂತೆಮಾಡಬೇಡಿರಿ; ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವಂಥ ಮಾತನ್ನೇ ಆಡಿರಿ; ಮಾತಾಡುವವರು ನೀವಲ್ಲ, ಪವಿತ್ರಾತ್ಮನೇ. ಆದದರಿಂದ ಏನು ಉತ್ತರ ಕೊಡಬೇಕೆಂಬ ವಿಷಯದಲ್ಲಿ ನಾವು ಮುಂದಾಗಿ ಯೋಚಿಸುವದಿಲ್ಲವೆಂದು ನಿಮ್ಮ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಳ್ಳಿರಿ. ಯಾಕಂದರೆ ನಿಮ್ಮ ವಿರೋಧಿಗಳೆಲ್ಲರೂ ಎದುರು ನಿಲ್ಲುವುದಕ್ಕೂ ಎದುರು ಮಾತನಾಡುವುದಕ್ಕೂ ಆಗದಂಥ ಬಾಯನ್ನೂ ಬುದ್ಧಿಯನ್ನೂ ನಾನೇ ನಿಮಗೆ ಕೊಡುತ್ತೇನೆ(ಮಾರ್ಕ 13:11; ಲ್ಯೂಕ 21:14-15).

**9. ಕುಟುಂಬಗಳಲ್ಲಿ ನಂಬಿಕೆದ್ರೋಹ**

ಆಗ ಬಹಳಷ್ಟು ಜನರ ಮನನೋಯುತ್ತದೆ. ಈಗ ಅಣ್ಣನು ತಮ್ಮನನ್ನು, ತಂದೆಯು ಮಗನನ್ನು ಮರಣಕ್ಕೆ ಒಪ್ಪಿಸುವರು! ಬಂಧುಬಾಂಧವರೂ ಸ್ನೇಹಿತರೂ; ಮತ್ತು ಮಕ್ಕಳು ಹೆತ್ತವರ ಮೇಲೆ ತಿರುಗಿಬಿದ್ದು ಅವರನ್ನು ಕೊಲ್ಲಿಸುವರು. ಇದಲ್ಲದೆ ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆ ಮಾಡುವರು. ಆದರೂ ನಿಮ್ಮದೊಂದು ತಲೆಕೂದಲಾದರೂನಾಶವಾಗುವುದಿಲ್ಲ. ನಿಮ್ಮ ಸ್ಥೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ(ಮತ್ತಾಯ 24:9-10; ಮಾರ್ಕ 13:12-13; ಲ್ಯೂಕ 21:16-19).

**10. ಪ್ರೀತಿ ತಣ್ಣಗಾಗುತ್ತದೆ**

ಇದಲ್ಲದೆ ಅಧರ್ಮವು ಹೆಚ್ಚಾಗುವುದರಿಂದ ಬಹು ಜನರ ಪ್ರೀತಿಯು ತಣ್ಣಗಾಗಿ ಹೋಗುವದು. ಆದರೆ ಕಡೇವರೆಗೂ ತಾಳುವವನು ರಕ್ಷಣೆಹೊಂದುವನು (ಮತ್ತಾಯ 24:12-13).

**11.** ಮೊದಲು **ಪರಲೋಕ ರಾಜ್ಯದ ಈ ಸುವಾರ್ತೆಯು** ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲ್ಪಡಬೇಕು; **ಆಗ** ಅಂತ್ಯವು ಬರುವದು(ಮತ್ತಾಯ 24:14; ಮಾರ್ಕ 13:10).

**12. ಯೆರೂಸಲೇಮ್ ನಲ್ಲಿನ ಜನಶೂನ್ಯತೆಯ ಜುಗುಪ್ಸೆ**

ಆದರೆ ದಂಡುಗಳು ಯೆರೂಸಲೇಮ್ ಪಟ್ಟಣಕ್ಕೆ ಮುತ್ತಿಗೆ ಹಾಕಿರುವುದನ್ನು ನೀವು ಕಾಣುವಾಗ ಅದು ಹಾಳಾಗುವ ಕಾಲ ಸಮೀಪವಾಯಿತೆಂದು ತಿಳುಕೊಳ್ಳಿರಿ (ಲ್ಯೂಕ 21:20). ಆದುದರಿಂದ ಪ್ರವಾದಿಯಾದದಾನಿಯೇಲನು ಹೇಳಿದಂಥ *ಹಾಳುಮಾಡುವ ಅಸಹ್ಯವಸ್ತುವು ಪವಿತ್ರ ಸ್ಥಾನದಲ್ಲಿ ನಿಂತಿರುವುದನ್ನು* ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ)ಯೂದಾಯದಲ್ಲಿರುವವರೂ ಬೆಟ್ಟಗಳಿಗೆ ಓಡಿ ಹೋಗಲಿ;ಮಾಳಿಗೆಯ ಮೇಲೆ ಇರುವವನು ತನ್ನ ಮನೆಯೊಳಗಿರುವದನ್ನು ತೆಗೆದುಕೊಳ್ಳುವುದಕ್ಕೆ ಇಳಿಯದೆ, ಹೊಲದಲ್ಲಿರುವವನು ತನ್ನ ಹೊದಿಕೆಯನ್ನು ತೆಗೆದುಕೊಳ್ಳುವುದಕ್ಕೆಹಿಂತಿರುಗಿಬಾರದೆ ಓಡಿಹೋಗಲಿ. (ಮತ್ತಾಯ 24:15-18; ಮಾರ್ಕ 13:14-16; ಲ್ಯೂಕ 17:31; 21:21). ಆದರೆ ಆ ದಿನಗಳಲ್ಲಿ ಬಸುರಿಯರಿಗೂ ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ! ಆಗ ಮಹಾ ಸಂಕಟ ಉಂಟಾಗುವುದರಿಂದ ನಿಮ್ಮ ಪಲಾಯನವು ಚಳಿಗಾಲದಲ್ಲಿಯಾಗಲಿ ಸಬ್ಬತ್ ದಿನದಲ್ಲಿಯಾಗಲಿ ಆಗಬಾರದೆಂದು ಪ್ರಾರ್ಥನೆಮಾಡಿರಿ.(ಮತ್ತಾಯ 24:19-20; ಮಾರ್ಕ 13:17-18; ಲ್ಯೂಕ 21:23). ಅವರು ಕತ್ತಿಯ ಬಾಯಿಗೆ ಬೀಳುವರು; ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು; ಅನ್ಯದೇಶದವರ ಸಮಯಗಳು ಪೂರೈಸುವ ತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುತ್ತಿರುವುದು.(ಲ್ಯೂಕ 21:24).

**13. ಯಾಕೋಬನ ತೊಂದರೆಗಳ ಸಮಯ** (ಯೆರೆಮೀಯ 30:6-7)

ಆ *ದಿವಸಗಳು* ಮಹಾ ಸಂಕಟದ ದಿವಸಗಳಾಗಿರುವುವು; ಅಂಥ ಸಂಕಟವು ದೇವರು ಮಾಡಿದ ಸೃಷ್ಟಿ ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ; ಇನ್ನು ಮೇಲೆಯೂ ಆಗುವುದಿಲ್ಲ. ಕರ್ತನು ಆ ದಿನಗಳನ್ನು ಕಡಿಮೆಮಾಡದಿದ್ದರೆ ಒಂದು ನರಪ್ರಾಣಿಯಾದರೂ ಉಳಿಯದು; ಆದರೆ ತಾನು ಆದುಕೊಂಡವರಿಗೋಸ್ಕರ ಆ ದಿನಗಳನ್ನು ಕಡಿಮೆ ಮಾಡುವನು (ಮತ್ತಾಯ 24:21-22; ಮಾರ್ಕ 13:19-20; ಲ್ಯೂಕ 21:23). ಯಾಕಂದರೆ ಬರೆದಿರುವದೆಲ್ಲಾ ನೆರವೇರುವದಕ್ಕಾಗಿ ಅವು ದಂಡನೆಯ ದಿವಸಗಳಾಗಿವೆ.(ಲ್ಯೂಕ 21:22).

**14. ಸುಳ್ಳು ಕ್ರಿಸ್ತರು ಮತ್ತು ಸುಳ್ಳು ಪ್ರವಾದಿಗಳು**

ಆಗ ಯಾರಾದರೂ ನಿಮಗೆ- *ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ* ಎಂದು ಹೇಳಿದರೆ ನಂಬಬೇಡಿರಿ. ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವರನ್ನು ಸಹಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. ಇಗೋ ನಿಮಗೆ ಮುಂದಾಗಿ ಹೇಳಿದ್ದೇನೆ.(ಮತ್ತಾಯ 24:23-24; ಮಾರ್ಕ 13:21-23).ಆದಕಾರಣ ಯಾರಾದರು ನಿಮಗೆ- ಅಗೋ *ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು* ಹೇಳಿದರೆ ಹೊರಟುಹೋಗಬೇಡಿರಿ; ಇಗೋ *ಕೋಣೆಗಳಲ್ಲಿದ್ದಾನೆಂದು* ಹೇಳಿದರೆ ನಂಬಬೇಡಿರಿ.*ಹೇಗೆ* ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು(ಮತ್ತಾಯ 24:26-27; ಲ್ಯೂಕ 17:23-24).

**15. ಪರಲೋಕದ ಸಂಕೇತಗಳು**

ಆ ದಿನಗಳ ಸಂಕಟವು ತೀರಿದಕೂಡಲೇ ಸೂರ್ಯನು ಕತ್ತಲಾಗಿಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು.(ಮತ್ತಾಯ 24:29; ಮಾರ್ಕ 13:24-25; ಲ್ಯೂಕ 21:25).ಭೂಮಿಯ ಮೇಲೆ ಸಮುದ್ರದ ಮತ್ತು ತೆರೆಗಳ ಘೋಷದ ನಿಮಿತ್ತವಾಗಿ ಜನಗಳಿಗೆ ದಿಕ್ಕು ಕಾಣದೆ ಸಂಕಟವು ಉಂಟಾಗುವದು. ಆಕಾಶದ ಶಕ್ತಿಗಲು ಕದಲುವದರಿಂದ ಮನುಷ್ಯರು ಭಯಹಿಡಿದವರಾಗಿ ಲೋಕಕ್ಕೆ ಏನು ಬರುವದೋ ಎಂದು ಎದುರುನೋಡುತ್ತಾ ಪ್ರಾಣಹೋದಂತಾಗುವರು(ಲ್ಯೂಕ 21:25-26).

**16.** ಆಗ **ಮನುಷ್ಯಕುಮಾರನನ್ನು ಸೂಚಿಸುವ ಗುರುತು** ಆಕಾಶದಲ್ಲಿ ಕಾಣಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ



ಮೇಲೆ ಬರುವದನ್ನು ಕಾಣುವರು. ಮತ್ತು ಆತನು ತುತೂರಿಯ ಮಹಾಶಬ್ದದಿಂದ ತನ್ನ ದೂತರನ್ನು ಕಳುಹಿಸುವನು, ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕು ದಿಕ್ಕುಗಳಿಂದ ಒಟ್ಟುಗೂಡಿಸುವರು. (ಮತ್ತಾಯ 24:30-31; ಮಾರ್ಕ 13:26-27; ಲ್ಯೂಕ 21:27).

**17.** ಆದರೆ ಇವು ಸಂಭವಿಸುವದಕ್ಕೆ ಆರಂಭವಾದಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆಯು ಸಮೀಪವಾಗಿದೆ(ಲ್ಯೂಕ 21:28).

**18.** ಆತನು ಅವರಿಗೆ ಒಂದು ಸಾಮ್ಯ ಕೊಟ್ಟು ಹೇಳಿದ್ದೇನಂದರೆ - ಅಂಜೂರ ಮುಂತಾದ ಮರಗಳನ್ನೂ ನೋಡಿರಿ. ಅವು ಚಿಗುರಿದ ಕೂಡಲೆ ನೀವು ಅದನ್ನು ಕಂಡು ಈಗ ಬೇಸಿಗೆಯು ಹತ್ತಿರವಾಯಿತೆಂದು ನೀವಾಗಿ ತಿಳುಕೊಳ್ಳುತ್ತೀರಲ್ಲಾ. ಹಾಗೆಯೇ ***ನೀವು ಸಹ ಇವುಗಳಾಗುವದನ್ನು ನೋಡುವಾಗ ದೇವರ ರಾಜ್ಯವು ಹತ್ತಿರವದೆ ಎಂದು ತಿಳುಕೊಳ್ಳಿರಿ*** (ಮತ್ತಾಯ 24:32-33; ಮಾರ್ಕ 13:28-29; ಲ್ಯೂಕ 21:29-31). ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು.(ಮತ್ತಾಯ 24:36; ಮಾರ್ಕ 13:32).

**19. ನೋಹನ ದಿವಸಗಳು** ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವದು. ಹೇಗಂದರೆ ಜಲಪ್ರಳಯಕ್ಕೆ ಮುಂಚಿನದಿನಗಳಲ್ಲಿ ನೋಹನು ನಾವೆಯಲ್ಲಿ ಸೇರಿದ ದಿನದ ತನಕ ಜನರು ಉಣ್ಣುತ್ತಾ ಕುಡಿಯುತ್ತಾ ಮದುವೆಮಾಡಿಕೊಳ್ಳುತ್ತಾ, ಮಾಡಿಕೊಡುತ್ತಾ ಇದು, ಪ್ರಳಯದ ನೀರು ಬಂದು ಎಲ್ಲರನ್ನು ಬಡುಕೊಂಡುಹೋಗುವ ತನಕ ಏನೂ ತಿಳಿಯದೆ ಇದ್ದರಲ್ಲಾ. ಅದರಂತೆ ಮನುಷ್ಯಕುಮಾರನು ಪ್ರತ್ಯಕ್ಷನಾಗುವ ಕಾಲದಲ್ಲಿಯೂ ಇರುವದು(ಮತ್ತಾಯ 24:37-39; ಲ್ಯೂಕ 17:26-27).

**20. ಲೋಟನ ದಿವಸಗಳಲ್ಲಿ**ನಡೆದ ಪ್ರಕಾರ ನಡೆಯುವದು. ಅವರು ಊಟ ಮಾಡುತ್ತಿದ್ದರು, ಕುಡಿಯುತ್ತಿದ್ದರು, ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು. ಆದರೆಲೋಟನು ಸೊದೋಮ್ ಊರನ್ನು ಬಿಟ್ಟು ಹೋದ ದಿವಸದಲ್ಲಿ ಆಕಾಶದಿಂದ ಬೆಂಕಿಗಂಧಕಗಳು ಸುರಿದು ಅವರೆಲ್ಲರನ್ನು ನಾಶಮಾಡಿದವು. ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ ಅದೇ ರೀತಿಯಾಗಿ ಇರುವದು.(ಲ್ಯೂಕ 17:28-30).

**21.** ಲೋಟನ ಹೆಂಡತಿಯನ್ನು ನೆನಪಿಗೆ ತಂದುಕೊಳ್ಳಿರಿ. ತನ್ನ ಪ್ರಾಣವನ್ನು ದೊರಕಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಪ್ರಾಣವನ್ನು ಕಳಕೊಂಡವನು ಅದನ್ನು ರಕ್ಷಿಸಿಕೊಳ್ಳುವನು.(ಲ್ಯೂಕ 17:32-33).

**22.** *ಆ ರಾತ್ರಿಯಲ್ಲಿ* ಒಂದೇಮಂಚದ ಮೇಲೆ ಇಬ್ಬರಿರುವರು; ಒಬ್ಬನು ತೆಗೆದುಕೊಳ್ಳಲ್ಪಡುವನು, ಮತ್ತೊಬ್ಬನು ಬಿಡಲ್ಪಡುವನು. ಇಬ್ಬರು ಹೆಂಗಸರು ಒಂದೇ ಕಲ್ಲಲ್ಲಿ ಬೀಸುತ್ತಿರುವರು; ಒಬ್ಬಳು ತೆಗೆದುಕೊಡಲ್ಪಡುವಳು, ಮತ್ತೊಬ್ಬಳು ಬಿಡಲ್ಪಡುವಳು(ಮತ್ತಾಯ 24:40-41; ಲ್ಯೂಕ 17:34-36).ಈ ಮಾತಿಗೆ ಶಿಷ್ಯರು - ಸ್ವಾಮಿ, ಅದು ಎಲ್ಲಿ ಆಗುವದು ಎಂದು ಕೇಳಲು ಆತನು ಅವರಿಗೆ "ಹೆಣ ಎಲ್ಲಿಯೋ ಅಲ್ಲಿಯೇ ಹದ್ದುಗಳು ಕೂಡುವವು ಎಂದು ಉತ್ತರಕೊಟ್ಟನು".(ಮತ್ತಾಯ 24:28; ಲ್ಯೂಕ 17:37).

**23. ಸದಾಎಚ್ಚರದಿಂದಿರಿ ಮತ್ತು ಪ್ರಾರ್ಥಿಸುತ್ತಿರಿ**

ಇದು ಒಬ್ಬ ಮನುಷ್ಯನು ತನ್ನ ಮನೆಯನ್ನು ಬಿಟ್ಟು ಬೇರೋಂದು ದೇಶಕ್ಕೆ ಹೋಗುವಾಗ, ತನ್ನ ಆಳುಗಳಿಗೆ ಮನೇ ಆಡಳಿತವನ್ನು ಒಪ್ಪಿಸಿಕೊಟ್ಟು ಒಬ್ಬೊಬ್ಬನಿಗೆ ಅವನವನ ಕೆಲಸವನ್ನು ನೇಮಿಸಿ ಬಾಗಲು ಕಾಯಿಯುವವನನ್ನು ಕರೆದು- ನೀನು ಎಚ್ಚರವಾಗಿರಬೇಕೆಂದು ಅಪ್ಪಣೆ ಕೊಡುವ ಪ್ರಕಾರ (ನಾನು ನಿಮಗೆ ಅಪ್ಪಣೆ ಕೊಡುತ್ತೇನೆ), ಆದ್ದರಿಂದಮನೇ ಯಜಮಾನನು ಸಂಜೆಯಲ್ಲೋ ಸರುಹೊತ್ತಿನಲ್ಲೋ ಕೋಳಿ ಕೂಗುವಾಗಲೋ ಮುಂಜಾನೆಯಲ್ಲೋ ಯಾವಾಗ ಬರುತ್ತಾನೋ ನಿಮಗೆ ಗೊತ್ತಿಲ್ಲದ ಕಾರಣ ಎಚ್ಚರವಾಗಿರಿ; ಅವನು ಏಕಾಏಕಿ ಬಂದು ನಿದ್ದೆಮಾಡುವದನ್ನು ಕಂಡಾನು. (ಮಾರ್ಕ 13:34-36).

**24.** ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರವಾಗಿದ್ದು ತನ್ನ ಮನೆಗೆ ಕನ್ನಾ ಹಾಕಗೊಡಿಸುತ್ತಿರಲಿಲ್ಲವೆಂದು ತಿಳುಕೊಳ್ಳಿರಿ. ಆದಕಾರಣ ನೀವು ಸಹ ಸಿದ್ಧವಾಗಿರ್ರಿ; ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ(ಮತ್ತಾಯ 24:43-44).

**25.** ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ. ಅತಿ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ *ಆ ದಿವಸವು* ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು. ಆ ಕಾಲವು ಯಾವಾಗ ಬರುವದೋ ನಿಮಗೆ ಗೊತ್ತಿಲ್ಲವಾದ್ದರಿಂದ ನೋಡಿಕೊಳ್ಳಿರಿ, ಜಾಗರೂಕರಾಗಿದ್ದು ಪ್ರಾರ್ಥಿಸಿರಿ. ಆ ದಿವಸವು ಭೂಮಿವಾಸಿಗಳೆಲ್ಲರ ಮೇಲೆ ಬರುವುದು. (ಮಾರ್ಕ 13:33; ಲ್ಯೂಕ 21:34-35).

**26.** ನಾನು ನಿಮಗೆ ಹೇಳುವುದನ್ನು, ಎಲ್ಲರಿಗೂ ಹೇಳುವೆನು: "ಬರುವದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವದಕ್ಕೂ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆಮಾಡಿಕೊಳ್ಳುತ್ತಾ ಎಚ್ಚರವಾಗಿರಿ"(ಲ್ಯೂಕ 21:36).

**27.** ಇದೆಲ್ಲಾ ಆಗುವ ತನಕ ಈ *ಸಂತತಿಯು* ಅಳಿದುಹೋಗುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ, ಭೂಮ್ಯಾಕಾಶಗಳು ಅಳಿದು ಹೋಗುವುವು, ಆದರೆ ನನ್ನ ಮಾತುಗಳು ಅಳಿದು ಹೋಗುವುದೇ ಇಲ್ಲ (ಮತ್ತಾಯ 24:34-35; ಮಾರ್ಕ 13:30-31; ಲ್ಯೂಕ 21:32-33).

**ತನ್ನ ಭವ್ಯವಾದ ಸಿಂಹಾಸನದ ಮೇಲೆ ಕುಳಿತಿರುವ, ಮಹಾನ್ ದೊರೆ - ಪ್ರಭು ಯೇಸು ಕ್ರಿಸ್ತನು ಅದ್ಭುತ ಶಕ್ತಿ ಮತ್ತು ಭವ್ಯತೆಯಿಂದ ತನ್ನ ಪವಿತ್ರದೇವದೂತರುಮತ್ತು ಸಂತರೊಡನೆ ಶೀಘ್ರದಲ್ಲಿಯೇ ಹಿಂತಿರುಗಿ ಬರುವನು.**

**ದೇವರ ಬಗ್ಗೆ ಭಯವಿರಲಿ ಮತ್ತು ಆತನಿಗೆ ಭವ್ಯತೆಯನ್ನು ನೀಡಿ, ಏಕೆಂದರೆ ಆತನ ನ್ಯಾಯ ನಿರ್ಧಾರದ ಸಮಯ ಈಗ ಬಂದಿದೆ; ಮತ್ತು ಸ್ವರ್ಗ ಮತ್ತು ಭೂಮಿಯನ್ನು, ಸಾಗರ ಮತ್ತು ಹರಿವ ನದಿಗಳನ್ನು ಸೃಷ್ಟಿಸಿದ ಆತನನ್ನು ಆರಾಧಿಸಿ**

(ಪ್ರಕಟನೆ 14:7)

## ಸಮಯ ಇನ್ನು ತಡ ಮಾಡುವುದಿಲ್ಲ!

**ಪರಲೋಕರಾಜ್ಯ ಈಗ ಹತ್ತಿರ ಬಂದಿದೆ. ಪಶ್ಚಾತ್ತಾಪ ಪಡಿ ಮತ್ತು ಸುವಾರ್ತೆಯಲ್ಲಿ ನಂಬಿಕೆ ಇರಿಸಿ.**

**ಕರ್ತನಾದ ಯೇಸು ಕ್ರಿಸ್ತನನ್ನು ಸಂಧಿಸಲು ಸಿದ್ಧರಾಗಿ!**



# ಪರಲೋಕ ರಾಜ್ಯದ ಸುವಾರ್ತೆ

**KANNADA | ಕನ್ನಡ**


ಏಂಜೆಲ್ ಟಿ.ವಿ. ವೀಕ್ಷಿಸಿ

| | |
|---|---|
| Satellite | :INTELSAT17@66Degrees |
| Band | :C |
| Downlink Frequency | :4015.0MHz |
| SymbolRate | :30.000Msps |
| FEC | :3/4 |
| Modulation | :DVB-S2&8psk |
| Polarization | :Vertical |